ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ಚಿರತೆಗಳ ಹಾವಳಿ ಕುರಿತು

ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1004 (1048) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶ್ರೀರಂಗಪಟ್ಟಣದ ಸೀತಾಪುರ ಬಳಿ ಕಾವೇರಿ ನದಿಯಲ್ಲಿರುವ ಕಾರೆಕುರ ಬಳಿ ಇರುವ ಬೇವಿನಕುರ ದ್ವೀಪದಲ್ಲಿ ಚಿರತೆಗಳ ಹಾವಳಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈಚೆಗೆ ಈ ದ್ವೀಪದ ಸುತ್ತಮುತ್ತ ಇರುವ ಸೀತಾಪುರ ಮೊದಲಾದ ಹಳ್ಳಿಗಳ ಜಮೀನಿನಲ್ಲಿ ಚಿರತೆಗಳು 5 ಕುರಿ, 2 ಸಾಕುನಾಯಿ, 10ಕ್ಕೂ ಹೆಚ್ಚು ಹಸುಗಳನ್ನು ಬೇಟೆಯಾಡಿ ಕೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಚಿರತೆಗಳ ಕಾಟವನ್ನು ತಪ್ಪಿಸಲು ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡು ಜಾನುವಾರು ಗಳನ್ನು ಕಳೆದುಕೊಂಡವವರಿಗೆ ಪರಿಹಾರ ನೀಡುವುದೇ ?